**ದೃಶ್ಯಕಲೆಯಲ್ಲಿ ತಮ್ಮದೇ ಛಾಪು, ಇಂಪು-ಕಂಪು ಮೂಡಿಸಿದ ಕಲಾವಿದ ಎಂ.ಬಿ. ಪಾಟೀಲ್ ಇತ್ತೀಚೆಗೆ (ಸೆಪ್ಟೆಂಬರ್ 09, 2017) ನಿಧನರಾದರು. ಅವರು ಸೃಷ್ಟಿದ ಕಲೆಯ ಭಾಷೆ, ಜೀವಂತ ಬಣ್ಣದ ಪ್ರಪಂಚದ ಬಗೆಗಿನ ಚಿತ್ರಣ ಇಲ್ಲಿದೆ...**

ಕಲಾವಿದ ಎಂ.ಬಿ. ಪಾಟೀಲರು (ಮಲ್ಲಿಕಾರ್ಜುನ ಭೀಮನಗೌಡ ಪಾಟೀಲ್) ಯುವಕರಾಗಿದ್ದಾಗ ತಮ್ಮ ಊರಿಗೆ ಬಂದ ಕಂಪನಿ ನಾಟಕದಲ್ಲಿ ಒಂದು ಪಾತ್ರ ವಹಿಸಿದ್ದರಂತೆ. ಇವರ ಕಲೆಯ ಪರಿಚಯವಿಲ್ಲದ, ಆಸಕ್ತಿ ಹಾಗೂ ನಂಬಿಕೆಯೂ ಇರದಿದ್ದ ಇವರ ತಂದೆ ಮೈಕಿನಲ್ಲಿ ಪ್ರಸಾರಗೊಳ್ಳುತ್ತಿದ್ದ ಧ್ವನಿ ತಮ್ಮ ಮಗನದ್ದೇ ಎಂದರಿತು, ಗುಟ್ಟಾಗಿ ನಾಟಕ ನೋಡಿ ಮೆಚ್ಚಿಕೊಂಡು ಬಂದಿದ್ದರಂತೆ. ಮುಂದೊಮ್ಮೆ, ಬೆಂಗಳೂರಿನಲ್ಲಿ ವಾರ್ತಾ ಮತ್ತು ಪ್ರಸಾರ ಇಲಾಖೆಯಲ್ಲಿ ಕಲಾವಿದರಾಗಿ ನಿವೃತ್ತರಾದ ಸಂದರ್ಭದಲ್ಲಿ, ಪಾಟೀಲರು ತಮ್ಮ ಕೃತಿಗಳ ಏಕವ್ಯಕ್ತಿ ಪ್ರದರ್ಶನವನ್ನು 'ಇಮೇಜಸ್' ಗ್ಯಾಲರಿಯಲ್ಲಿ ಏರ್ಪಡಿಸಿದ್ದರು. ಉದ್ಘಾಟಿಸಿದ ಮತ್ತೊಬ್ಬ ಕಲಾವಿದ ಗೆಳೆಯ ಕೆ.ಟಿ. ಶಿವಪ್ರಸಾದರು ಮಾತನಾಡುತ್ತ, 'ಪಾಟೀಲರು ಈಗ ನಿವೃತ್ತರಾಗಿದ್ದಾರೆ. ಇನ್ನು ಮುಂದೆ ಅವರು ಕೃತಿಗಳನ್ನು ನಿರಂತರವಾಗಿ ರಚಿಸುವಂತಾಗಲಿ' ಎಂದು ಆಶಿಸಿದ್ದರು. ಇವರು ಕೆಲಸಕ್ಕೆ ಸೇರಿದ ಮೊದಲ ತಿಂಗಳ ಅಂತ್ಯದಲ್ಲಿ ಇವರ ವಿವಾಹದ ಆಹ್ವಾನಪತ್ರಿಕೆ ಸ್ವತಃ ಇವರಿಗೇ ಅಂಚೆಯ ಮುಖಾಂತರ ತಲುಪಿತಂತೆ. ಮುಂಬಯಿಯಲ್ಲಿ ಓದುವಾಗ ದೈನಂದಿನ ಚಿತ್ರರಚನೆಗೆ ಅಗತ್ಯವಿದ್ದ ಕಲಾಸಾಮಗ್ರಿಗಳನ್ನು ಇವರು ಸುತ್ತಲಿನ ಗೆಳೆಯರ ಒಳ್ಳೆಯತನದಿಂದಾಗಿ ತಮಗಾಗಿ ಒದಗಿಸಿಕೊಳ್ಳುತ್ತಿದ್ದರಂತೆ.

ಈ ನಾಲ್ಕು ಘಟನೆಗಳು ಪಾಟೀಲರ ಜೀವನಕ್ಕೆ ಸಂಬಂಧಿಸಿದ ಘಟನೆಗಳಾದರೂ, ಅವರ ತಲೆಮಾರಿನ ಬಹುಪಾಲು ಕಲಾವಿದರಿಗೂ ಅನ್ವಯವಾಗುವಂಥದ್ದು. 60ರ ದಶಕದಿಂದ ಸುಮಾರು ಭಾರತೀಯ ಕಲೆಗೆ ಸಾಕ್ಷಿಯಾದ ಪಾಟೀಲರು ನೂತನ ಕಲಾಮಂದಿರದಲ್ಲಿ ಕಲೆಯನ್ನು ಕಲಿತು ಪೂರೈಸಿದಾಗ ವಯಸ್ಸು ಹೆಚ್ಚೇ ಆಗಿತ್ತು. ಇವರ ಕುರಿತಾಗಿ ಇರುವ ಜನಪ್ರಿಯ ನಂಬಿಕೆಯನ್ನು ಮೀರಿದ್ದು ಇವರ ಕೃತಿ, ಸಾಧನೆ ಹಾಗೂ ಮಾತುಗಾರಿಕೆ. ಕೃತಿಗಿಂತಲೂ ಕಲಾತ್ಮಕ ಚಟುವಟಿಕೆಗಳು ಮತ್ತು ಇವರ ಕ್ರಿಯಾಶೀಲತೆಯೇ ಇವರ ಸಾಧನೆ. ಆದರೆ ಕಲೆ ಎಂಬುದು ವಸ್ತುವಿನ ರೂಪದಲ್ಲಿ ಮಾತ್ರ ಇರಬೇಕೆಂದು ಸಂಗ್ರಹಾಲಯ, ಗ್ಯಾಲರಿ ಹಾಗೂ ಬರಹಗಳು ನಿರೀಕ್ಷಿಸುವ ನಮ್ಮ ಪರಿಸರದಲ್ಲಿ ಪಾಟೀಲರು ಕಳೆದುಹೋಗುವ ಸಾಧ್ಯತೆ ಹೆಚ್ಚು.

★★★

ಪಾಟೀಲರ ಚಿತ್ರಗಳನ್ನು ಮೂರು ವಿಧಗಳನ್ನಾಗಿ ವಿಂಗಡಿಸಬಹುದು. ಎಲ್ಲರಿಗೂ 'ಪಾಟೀಲ್ ಶೈಲಿ' ಎಂದು ಜನಪ್ರಿಯವಾಗಿರುವ ಜಾನಪದ ಸೊಗಡಿನ ಗ್ರಾಮೀಣ ಚಿತ್ರಣ ಒಂದು ಬಗೆ. 60 ಹಾಗೂ 70ರ ದಶಕದಲ್ಲಿ ಭಾರತೀಯವೆಂದರೆ ಜಾನಪದ ಹಾಗೂ ಸಾಂಪ್ರದಾಯಿಕ ಎಂದು ಜಗತ್ತಿಗೆ ಸಾರುವ ಅವಶ್ಯಕತೆಯಿತ್ತು. ಪಾಟೀಲರು ಮಾನಸಿಕವಾಗಿ ಈ ಗುಂಪನ್ನು ಸೇರಿ ಸರಾಗವಾಗಿ ಕರ್ನಾಟಕದ್ದೇ ಆದ ಜಾನಪದ ಸೊಗಡಿನ ಜಗತ್ತನ್ನು ಸೃಷ್ಟಿಸಿಕೊಟ್ಟರು. ಐತಿಹ್ಯ, ಜಾನಪದ ಕತೆಗಳನ್ನು ತನ್ನದಾಗಿಸಿಕೊಂಡ ಕಲಾಮಂಡಲವಿದು. ಹೀಗೆ ಚಿತ್ರಿಸುವವರ ದೃಶ್ಯಗಳು